'ಶೇಕ್‌ಸ್ಪಿಯರ್ ಮನೆಗೆ ಬಂದ' ನಾಟಕ ವಿಹಾರ

ಸೋಮಶಂಕರ ವಿ.*

DOI: https://doi.org/10.5281/zenodo.24338881

ABSTRACT

ಕನ್ನಡ ರಂಗಭೂಮಿ ಹೊಸ ಪ್ರಯೋಗಗಳಿಗೆ ಬೆನ್ನೆಲುಬಾದ ಕ್ಷೇತ್ರ. ಹಲವು ಬರಹಗಾರರು ವಿವಿಧ ರೀತಿಯಲ್ಲಿ ತಮ್ಮ ಜ್ಞಾನದ ಪರಿಕರಗಳನ್ನು ರಂಗ ಪ್ರವೇಶಕ್ಕೆ ಎದುರು ಮಾಡಿ ಯಶಸ್ವಿಯಾಗಿದ್ದಾರೆ. ನಟರಾಜ್ ಹುಳಿಯಾರ್ ಅದೇ ಮಾರ್ಗ ಹಿಡಿದ ಮತ್ತೊಬ್ಬ ಪ್ರಯೋಗಿ. ತಮ್ಮ 'ಶೇಕ್‌ಸ್ಪಿಯರ್ ಮನೆಗೆ ಬಂದ' ನಾಟಕವು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಹೊಸ ಚಿಂತನೆ ಎಂಬುದು ವಿದ್ವಾಂಸರ ಅಭಿಪ್ರಾಯ. ಪಠ್ಯಕೇಂದ್ರಿತ ವಿಮರ್ಶೆಯಿಂದ ಗುರುತಿಸಿಕೊಂಡಿರುವ ಲೇಖಕರು ಶೇಕ್‌ಸ್ಪಿಯರ್‌ನ ಸಮಗ್ರ ಬದುಕಿನ ಚಿತ್ರಣವನ್ನು ನಿಗದಿತ ಅವಧಿಯೊಳಗೆ ಮುಗಿಸಬಹುದಾದ ನಾಟಕದ ಮೂಲಕ ಪರೀಕ್ಷೆಗೆ ಒಳಪಡಿಸಿರುವುದು ಸಾಹಸವೆಂದು ಪರಿಗಣಿಸಬಹುದು.

KEYWORDS: ಶೇಕ್‌ಸ್ಪಿಯರ್ ಮನೆಗೆ ಬಂದ, ನಟರಾಜ್ ಹುಳಿಯಾರ್, ಕನ್ನಡ ರಂಗಭೂಮಿ, ಪ್ರಾಯೋಗಿಕ ನಾಟಕ, ವಿಮರ್ಶಾತ್ಮಕ ಓದು.

* **ಸೋಮಶಂಕರ ವಿ.,** ಸಂಶೋಧನಾರ್ಥಿ, ಕನ್ನಡ ವಿಭಾಗ, ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

ಪರಿಚಯ:

ವಿಲಿಯಂ ಶೇಕ್‌ಸ್ಪಿಯರ್ ಲೋಕೋತ್ತರವಾದ ಕವಿ. ಅವರ ಹೆಸರಿಲ್ಲದೆ, ಅವರ ಸಾಹಿತ್ಯವಿಲ್ಲದೆ ಇಂಗ್ಲಿಷ್ ಸಾಹಿತ್ಯ ಕುರಿತು ಪರಿಚಯಿಸುವುದಾಗಲಿ, ಚರ್ಚಿಸುವುದಾಗಲಿ, ವಿಮರ್ಶಿಸುವುದಾಗಲಿ ಅಸಾಧ್ಯ. "ಎಲ್ಲಿಯವರೆಗೆ ಶೇಕ್‌ಸ್ಪಿಯರ್ ಇರುತ್ತಾನೋ ಅಲ್ಲಿಯವರೆಗೂ ಇಂಗ್ಲಿಷ್ ಇರುತ್ತದೆ ಮತ್ತು ಎಲ್ಲಿಯವರೆಗೂ ಇಂಗ್ಲಿಷ್ ಬದುಕಿರುತ್ತದೆಯೋ ಅಲ್ಲಿಯವರೆಗೂ ಶೇಕ್‌ಸ್ಪಿಯರ್ ಬದುಕಿರುತ್ತಾನೆ" ಎಂದ ಜಾರ್ಜ್ ಬರ್ನಾರ್ಡ್ ಷಾ ಮಾತು ಅತಿಶಯೋಕ್ತಿಯೆಲ್ಲ. ನಾಟಕ, ಸಾನೆಟ್‌ಗಳ ಮೂಲಕ ಓದುಗರನ್ನು ಭಾವಲೋಕದ ತುದಿಗೆ ಕೊಂಡೊಯ್ದು ಅವರಲ್ಲಿ ಗಾಢವಾದ ಅನುಭೂತಿಯನ್ನುಂಟುಮಾಡುವಲ್ಲಿ ಶೇಕ್‌ಸ್ಪಿಯರ್ ಸಫಲನಾಗಿದ್ದಾನೆ. ಇಂಗ್ಲೆಂಡಿನಲ್ಲಿ ಹುಟ್ಟಿ, ಇಂಗ್ಲಿಷಿನಲ್ಲಷ್ಟೇ ಕೃತಿ ರಚಿಸಿದರೂ ಪ್ರತಿಯೊಂದು ದೇಶವು ಅವರನ್ನು ತಮ್ಮವರನ್ನಾಗಿಸಿಕೊಂಡಿದ್ದಾರೆ. ಎಷ್ಟೋ ಬಾರಿ ತಾನು ಲೇಖಕನೋ ಅಲ್ಲವೋ ಎಂಬ ಬಗೆಗೆ ತನಗೇ ಖಾತ್ರಿಯಿರದ ವಿಲಿಯಂ ಶೇಕ್‌ಸ್ಪಿಯರ್ ನಾಲ್ಕು ನೂರು ವರ್ಷಗಳ ಹಿಂದೆ ಬರೆದ ನಾಟಕ, ಕಾವ್ಯವನ್ನು ಪವಿತ್ರ ಗ್ರಂಥಗಳಂತೆ ಜನ ಇಂದಿಗೂ ಓದುತ್ತಾರೆ.

ಜಗತ್ತಿನ ಅಕ್ಷರಸ್ಥ ವಲಯದಲ್ಲಂತೂ ಶೇಕ್‌ಸ್ಪಿಯರ್ ಒಂದಲ್ಲ ಒಂದು ಬಗೆಯ ಸೆಳೆತ ಇದ್ದೇ ಇದೆ. ಶೇಕ್‌ಸ್ಪಿಯರ್ ನಾಟಕಗಳ ನಿತ್ಯ ಜೀವಂತಿಕೆಗೆ ಅವುಗಳಲ್ಲಿ ಹುಟ್ಟಿಸುವ ಸಾಹಿತ್ಯ ಸ್ಪಂದನ ಇನ್ನೊಂದು ಕಾರಣ. ಅವರು ಸಂಪೂರ್ಣವಾಗಿ ರಂಗಭೂಮಿಯ ವ್ಯಕ್ತಿಯಾಗಿದ್ದು ಓದುವವರನ್ನು, ನೋಡುವವರನ್ನು ಸದಾ ಎಚ್ಚರದಲ್ಲಿಡುವ ಕಲೆ ಅವರಿಗೆ ಒಲಿದುಬಿಟ್ಟಿತ್ತು. ದುರಂತ, ಹಾಸ್ಯ, ತೀವ್ರ ಚಿಂತನೆ ಎಲ್ಲವನ್ನೂ ಹೇಳಬಲ್ಲ ನುಡಿಗಟ್ಟುಗಳು ದಕ್ಕಿದ್ದವು. ಕತೆಯ ಓಟ, ಪಾತ್ರಗಳ ತೀವ್ರತೆಯ ನಾಟ್ಯೀಕರಣದ ಜೊತೆಜೊತೆಗೇ ಭಾಷೆಯ ಬಗೆಬಗೆಯ ಆಟಗಳ ಮೂಲಕವೂ ನಮ್ಮನ್ನು ಹಿಡಿದಿಡುವ ಕೌಶಲ ಅವರಿಗಿತ್ತು. ಆದ್ದರಿಂದ ಸಾಹಿತ್ಯ ಜಗತ್ತಿನ ಅಮರ ವ್ಯಕ್ತಿಯಾದ.

ಇಂಗ್ಲೆಂಡಿನ ರಾಷ್ಟ್ರಕವಿ ಕಿರೀಟಧಾರಿ, ಬದುಕಿ ಬಾಳಿದ ಐವತ್ತೆರಡು ವರ್ಷಗಳ ಅವಧಿಯಲ್ಲಿ ಮೂವತ್ತೇಳು ನಾಟಕಗಳನ್ನು ರಚಿಸಿದ. ಇವನ್ನು ಕಾಮಿಡಿ, ಟ್ರ್ಯಾಜಿಡಿ (ಬೇಂದ್ರೆಯವರು ದುರಂತ ನಾಟಕಕ್ಕೆ ಅವಿದ್ಧ ಪ್ರಯೋಗವೆಂದು ಬಳಸಿರುವುದು ಇಲ್ಲಿ ಸ್ಮರಿಸಬಹುದು) ಮತ್ತು ಕಾಮಿಕ್–ಟ್ರ್ಯಾಜಿಡಿ ನಾಟಕಗಳೆಂದು ವರ್ಗೀಕರಿಸಬಹುದು. ಇವರ ನಾಟಕಗಳ ಬಗ್ಗೆ ಮೂಗು ಮುರಿಯುತ್ತಿದ್ದ ಇಂಗ್ಲೆಂಡಿನ ಪಂಡಿತರಿಗೆ ಉತ್ತರವಾಗಿ ಖಂಡಕಾವ್ಯ ಮತ್ತು ಎರಡು ಸುದೀರ್ಘ ಕಾವ್ಯಕೃತಿಗಳು, ಸುಮಾರು ನೂರೈವತ್ತನಾಲ್ಕು ಸುನೀತಗಳನ್ನು ಬರೆದ. ಜಗತ್ತಿನ ಪ್ರಮುಖ ಭಾಷೆಗಳಿಗೆ ಇವು ಭಾಷಾಂತರಗೊಂಡಿವೆ. ಶ್ರೀಮಂತರ ಕಲ್ಪನೆ, ಅಮೋಘ ಪಾತ್ರ ಸೃಷ್ಟಿ, ಮನುಷ್ಯ ಭಾವಗಳಾದ ಅಸೂಯೆ, ಕೋಪ, ಚಂಚಲತೆ, ದ್ವೇಷ, ಶಂಕೆ, ಮತ್ಸರ, ಆಸೆ–ದುರಾಸೆ, ಪ್ರೀತಿ–ಅನುಕಂಪ, ರಾಜಕೀಯ ಚಾಣಾಕ್ಷತೆ, ಸಿನಿಕತೆ, ಸಾತ್ವಿಕತೆ ಎಲ್ಲವನ್ನು ತನ್ನ ನಾಟಕಗಳಲ್ಲಿ ಹರಳುಗಟ್ಟಿಸಿ ಬಟ್ಟಿ ಇಳಿಸಿದ್ದಾನೆ. ಇಂದಿನ ಡಿಜಿಟಲ್ ಯುಗದ ಆತಂಕದ ವಾತಾವರಣದಲ್ಲೂ ಶೇಕ್‌ಸ್ಪಿಯರ್ ನಾಟಕಗಳನ್ನು ಇನ್ನೂ ಓದುತ್ತಾರೆಂದರೆ

ಅದು ಆ ಬರಹದ ಶಕ್ತಿ ಮತ್ತು ಪ್ರಸ್ತುತತೆಯನ್ನು ಪ್ರತಿಬಿಂಬಿಸುತ್ತದೆ.

ಪುರಾತನ ಪ್ರಯೋಗಗಳು:

1871ರಲ್ಲಿ ಡೆಪ್ಯೂಟಿ ಚನ್ನಬಸಪ್ಪನವರ ಕಾಮಿಡಿ ಆಫ್ ಎರರ್ಸ್ ನಾಟಕದ ಅನುವಾದ 'ನಗರವನ್ನು ನಗಿಸುವ ಕತೆ'ಯಿಂದ ಮೊದಲಗೊಂಡು ಇಂದಿನವರೆಗೂ ಕನ್ನಡ ಸಂವೇದನೆಯನ್ನು ಹಲವು ಬಗೆಯಲ್ಲಿ ಪ್ರಭಾವಿಸುತ್ತಲೇ ಬಂದಿವೆ. ಅನುವಾದ, ಭಾಷಾಂತರ, ರೂಪಾಂತರ, ವಿಮರ್ಶೆ, ರಂಗಪ್ರವೇಶ ಇತ್ಯಾದಿ ರೂಪದಲ್ಲಿ ಕನ್ನಡ ಸಾಹಿತ್ಯಕ್ಕೆ ಶೇಕ್ಸ್‌ಪಿಯರ್ ನಿರಂತರವಾಗಿ ಹರಿದು ಬರುತ್ತಿದ್ದಾನೆ. ಪ್ರಮುಖ ವಿಮರ್ಶಕರು, ಅನುವಾದಕರು, ರಂಗತಜ್ಞರು, ಕನ್ನಡದ ಮಹತ್ವದ ವಿಮರ್ಶಕರು, ಪ್ರಾಮಾಣಿಕವಾಗಿ ದುಡಿದಿದ್ದಾರೆ ಮತ್ತೂ ದುಡಿಯುತ್ತಿದ್ದಾರೆ. ಕರ್ನಾಟಕದ ರಂಗ ಚಳುವಳಿಯ ಸಂದರ್ಭದಲ್ಲಿ ಕೆ. ವಿ. ಸುಬ್ಬಣ್ಣ, ಜಿ. ಎನ್. ರಂಗನಾಥ ರಾವ್, ಜಿ. ಕೆ. ಗೋವಿಂದರಾವ್, ರಾಜೇಂದ್ರ ಚೆನ್ನಿ, ಪ್ರಸನ್ನ, ಲಿಂಗದೇವರು ಹಳೆಮನೆ, ಕೆ. ವಿ. ಅಕ್ಷರ, ನಿಸಾರ್ ಅಹಮದ್ ಮೊದಲಾದವರು ಶೇಕ್ಸ್‌ಪಿಯರ್ ನಾಟಕ, ಕಾವ್ಯಗಳ ಕುರಿತು ಚಿಂತನೆ ನಡೆಸಿದ್ದಾರೆ.

ಮಾಸ್ತಿ ವೆಂಕಟೇಶ ಅಯ್ಯಂಗಾರರು ಶೇಕ್ಸ್‌ಪಿಯರ್ ಅವರ ಬಹುಪಾಲು ಕೃತಿಗಳನ್ನು ಅನುವಾದಿಸಿದ್ದಾರೆ; ವಿಮರ್ಶೆ ಮಾಡಿದ್ದಾರೆ, ತಾವು ಉಂಡ ಶೇಕ್ಸ್‌ಪಿಯರ್ ಸಾಹಿತ್ಯದ ಸವಿಯನ್ನು ಕನ್ನಡ ಓದುಗರಿಗೆ ಉಣಬಡಿಸಿದ್ದಾರೆ. ಡಿ. ವಿ. ಗುಂಡಪ್ಪನವರ 'ಮ್ಯಾಕ್ಬೆತ್' ಅನೇಕ ದೃಷ್ಟಿಗಳಿಂದ ಗಮನ ಸೆಳೆದ ಅನುವಾದ. ಶೇಕ್ಸ್‌ಪಿಯರ್ ಕಾವ್ಯವನ್ನು ಅನುವಾದಿಸಿದವರಲ್ಲಿ ಬಿ. ಎಂ. ಶ್ರೀ., ಹಟ್ಟಿಯಂಗಡಿ ನಾರಾಯಣರಾವ್, ಎಸ್. ಜಿ. ನರಸಿಂಹರಾವ್, ಕೆ. ಎಸ್. ನರಸಿಂಹಸ್ವಾಮಿ, ಬಿ. ಎ. ಸನದಿ, ಚನ್ನವೀರ ಕಣವಿ, ರಾಮಚಂದ್ರ ಶರ್ಮ, ಪು. ತಿ. ನ., ವಿನಾಯಕ, ಎಂ. ವಿ. ಸೀ., ಜಿ. ಎಸ್. ಶಿವರುದ್ರಪ್ಪ, ರಂ. ಶ್ರೀ. ಮುಗಳಿ, ಶಾ. ಬಾಲುರಾವ್, ತೀ. ನಂ. ಶ್ರೀ., ಅಂಬಿಕಾತನಯದತ್ತ ಮುಖ್ಯರು. ಕುವೆಂಪುರವರ ಬಿರುಗಾಳಿ (ಟೆಂಪೆಸ್ಟ್ ರೂಪಾಂತರ) ಮತ್ತು ರಕ್ತಾಕ್ಷಿ (ಹ್ಯಾಮ್ಲೆಟ್ ನಾಟಕದ ಅಳವಡಿಕೆ) ನಾಟಕಗಳು ಮುಕ್ತ ಛಂದಸ್ಸನ್ನು ದುಡಿಸಿಕೊಂಡಿರುವ ಕ್ರಮ, ಸ್ಥಳೀಯ ಚರಿತ್ರೆ, ಸನ್ನಿವೇಶಕ್ಕೆ ಒಗ್ಗಿಸಿಕೊಂಡಿರುವ ಬಗೆ ವಿಶಿಷ್ಟವಾಗಿದೆ. ಶಿವಪ್ರಕಾಶರು ಯಥಾವತ್ತಾದ ಅನುವಾದಕ್ಕಿಂತ ರೂಪಾಂತರ ಹೆಚ್ಚು ಸೂಕ್ತವೆಂದು ಭಾವಿಸಿದ್ದರ ಫಲ 'ಮಾರನಾಯಕನ ದೃಷ್ಟಾಂತ' (ಮ್ಯಾಕ್ಬೆತ್‌ನ ರೂಪಾಂತರ). ಇತ್ತೀಚೆಗೆ ಬಿಡುಗಡೆಯಾದ ಜಿ. ಎನ್. ಮೋಹನ್‌ರವರ 'ಪ್ರಶ್ನೆಗಳಿರುವುದು ಷೇಕ್ಸ್‌ಪಿಯರನಿಗೆ' ಕೃತಿಯವರೆಗೂ ಸ್ವಾಭಾವಿಕ ಸೃಷ್ಟಿಯಂತೆ ಬೆಳೆಯುತ್ತಿವೆ.

ವೈಶಿಷ್ಟ್ಯ :

ಈ ಪರಂಪರೆಯ ಕೊಂಡಿ ಮುರಿದು ಭಿನ್ನದಾರಿಯಲ್ಲಿ ಸಾಗಿದವರು ನಟರಾಜ್ ಹುಳಿಯಾರ್. ಭಾರತೀಯ ಸಾಹಿತ್ಯ ಸಂದರ್ಭದಲ್ಲಿ ವಿಶಿಷ್ಟ

ಪ್ರತಿಭೆಯುಳ್ಳವರು. ಕವಿ, ವಿಮರ್ಶಕ, ಲೇಖಕ, ಕಾದಂಬರಿಕಾರನಾಗಿ ಪ್ರತಿಷ್ಠಿತ ಕಾರ್ಯಗಳನ್ನು ಜವಾಬ್ದಾರಿಯಿಂದ ನಿರ್ವಹಿಸಿ ತಮ್ಮ ಅಭಿಕ್ಷಮತೆಯನ್ನು ನಿರೂಪಿಸಿದ್ದಾರೆ. ಇಂಗ್ಲಿಷ್ ಮತ್ತು ಕನ್ನಡ ಸಾಹಿತ್ಯವನ್ನು ಸೃಜನಶೀಲ ನೆಲೆಯಲ್ಲಿ ಒಗ್ಗೂಡಿಸಿ ನೋಡುವ ಸಮರ್ಥರು. ತಮ್ಮ ವಿನಯವಂತಿಕೆಯನ್ನು ಬಿಟ್ಟುಕೊಡದೆ ನಿಷ್ಠುರತೆಯನ್ನು ದಿಟ್ಟವಾಗಿ ಎದುರಿಸುತ್ತಾ ಸ್ವಕೀಯ ಅನಿಸಿಕೆ, ಅಭಿಪ್ರಾಯಗಳನ್ನು ಮಂಡಿಸುತ್ತಲೇ ಹೊಸ ಚರ್ಚೆ ಹುಟ್ಟು ಹಾಕಬಲ್ಲರು. ಅಂಥಹ ಸೂಕ್ಷ್ಮ ಸಂವೇದನೆಯುಳ್ಳ ಬರಹಗಾರನ ಲೇಖನಿಯಿಂದ ಅರಳಿದ ಕೃತಿಕಮಲ 'ಶೇಕ್‌ಸ್ಪಿಯರ್ ಮನೆಗೆ ಬಂದ' ನಾಟಕ.

ಕನ್ನಡದ ಹಲವು ವಿದ್ವಾಂಸರು ಶೇಕ್‌ಸ್ಪಿಯರನ ಯಾವುದಾದರೊಂದು ಪಠ್ಯ ಅಥವಾ ನಾಟಕವನ್ನು ರಂಗ ಪ್ರಯೋಗ ಮಾಡಿದರೆ ನಟರಾಜ್ ಹುಳಿಯಾರ್ ಶೇಕ್ಸ್‌ಪಿಯರ್‌ನ ಸಮಗ್ರ ನಾಟಕಗಳನ್ನು ಶೋಧಕ ಗುಣದ ದೃಶ್ಯ ವಿಮರ್ಶೆಗೆ ತೆರೆದಿಟ್ಟು ತನ್ನ ವಿದ್ವತ್ತನ್ನು ಮೆರೆದಿದ್ದಾರೆ. ಶೇಕ್ಸ್‌ಪಿಯರ್‌ನ ವೈಯಕ್ತಿಕ ಬದುಕನ್ನು ಆತನ ನಾಟಕ ಪಾತ್ರಗಳಿಂದ ಮುಖಾಮುಖಿಯಾಗಿಸಿರುವ ಕ್ರಮ ಅಪರೂಪವೆಂದೇ ಹೇಳಬೇಕು. ಶೇಕ್ಸ್‌ಪಿಯರ್‌ನ ಬರಹಗಳು ಹಲವು ಓದುಗಳ ಎದುರೀಜು ಇಲ್ಲಿದೆ. ಲಿಯರ್, ರೋಮಿಯೋ ಜೂಲಿಯೆಟ್, ಸೀಜರ್, ಒಥೆಲೋ, ಹ್ಯಾಮ್ಲೆಟ್ ಮುಂತಾದ ಪ್ರಮುಖ ಪಾತ್ರಗಳ ಮಾನಸಿಕ ಸ್ಥಿತಿಗತಿಗಳ ಒಳ ಹೊರಗನ್ನು ಸ್ವತಃ ಶೇಕ್ಸ್‌ಪಿಯರ್ ಅರ್ಥೈಸುವುದಕ್ಕೂ ರಂಗದ ಮೇಲಿನ ಮೇಷ್ಟ್ರು ಮತ್ತು ಹೊಸ ಪೀಳಿಗೆಯ ಓದುಗರು ಅರ್ಥೈಸುವ ಕ್ರಮಗಳು ಎದುರುಬದುರಾಗಿವೆ. ಆತನ ಬದುಕು ಮತ್ತು ಬರಹಗಳನ್ನು ಬಳಸಿಕೊಂಡು ವಾಸ್ತವ ಮತ್ತು ಕಲ್ಪನೆಯ ಅನುಸಂಧಾನ ಮಾಡಿ ನಟರಾಜ್ ಹುಳಿಯಾರ್ 'ಶೇಕ್ಸ್‌ಪಿಯರ್ ಮನೆಗೆ ಬಂದ' ನಾಟಕವನ್ನು ಹೆಣೆದಿದ್ದಾರೆ.

ಓದುಗರು ಶೇಕ್‌ಸ್ಪಿಯರನ ಬದುಕು–ಬರಹಗಳನ್ನು ಸ್ವೀಕರಿಸಿದ ರೀತಿ, ಕಂಡುಕೊಂಡ ಅರ್ಥಗಳು, ಮಾಡಿಕೊಂಡ ಅಪಾರ್ಥಗಳು, ಪೂರ್ವಗ್ರಹಗಳು, ಸೂಕ್ಷ್ಮ ಪ್ರತಿಕ್ರಿಯೆಗಳು ಎಲ್ಲವನ್ನೂ ಒಂದೇ ಮೂಸೆಯಲ್ಲಿ ಅದ್ದಿ ತೆಗೆದು ನಾಟಕ ಚಿತ್ತಾರ ಬಿಡಿಸಿರುವುದು ಕೃತಿಕರ್ತೃವಿನ ಸೃಜನಶೀಲ ಬುದ್ಧಿವಂತಿಕೆಗಿಡಿದ ಕನ್ನಡಿಯೆಂದೇ ಭಾವಿಸಬೇಕು. ಈ ಓದಿನಿಂದ ಸಾಹಿತ್ಯಾಸಕ್ತರಲ್ಲಿ ಕಾವ್ಯ – ನಾಟಕವನ್ನು ಓದುವ, ಗ್ರಹಿಸುವ ಮತ್ತು ಪರಿಭಾವಿಸುವ ಹೊಸ ಚಿಂತನೆಯ ಸೃಷ್ಟಿಯನ್ನು ಅಪೇಕ್ಷಿಸಬಹುದು. ಓಪನ್ ರೀಡಿಂಗ್, ಮಲ್ಟಿಪಲ್ ರೀಡಿಂಗ್, ಇಂದಿನ ಆಲೋಚನಾ ಕ್ರಮಗಳ ತಪ್ಪು ಓದುವಿಕೆ, ತಪ್ಪು ಗ್ರಹಿಸುವಿಕೆ, ತಪ್ಪಾಗಿ ಆಲೋಚಿಸುವಿಕೆಯ ಉಪಕ್ರಮಗಳನ್ನು ಬದಲಿಸಿಕೊಳ್ಳುವ ಎಲ್ಲಾ ಮಾನದಂಡಗಳು ಇದರಲ್ಲಿವೆ. ಹೊಸ ಜಾಯಮಾನದ ಓದುಗರ ಓದಿನ ಮಾರ್ಗವನ್ನು ಸುಸೂತ್ರವಾಗಿ ನಿರ್ಧರಿಸುವ, ಸೂಕ್ತವಾಗಿ ಬಳಸಿಕೊಳ್ಳುವ ಪರಿಭಾವನೆಯನ್ನು ಮೂಡಿಸುವ ಕಾರ್ಯತಂತ್ರವನ್ನು ಇಲ್ಲಿ ಕಾಣಬಹುದು. ಬದುಕು ಏಳು ಅಂಕಗಳ ನಾಟಕ. All the world is a stage, Men and women are merely players (ಜಗವೇ ಒಂದು ರಂಗಭೂಮಿ, ಈ ಗಂಡಸರು ಹೆಂಗಸರು ಬರೀ ನಟ–ನಟಿಯರು) ಎಂಬ ಸರ್ವೋಪ್ತಿತ ಸಂದೇಶ

ಸಾರಿದೆ.

ಶೇಕ್ಸ್‌ಪಿಯರ್‌ನ ನಾಟಕ ಸಾಹಿತ್ಯದ ಸಮಗ್ರ ವಿಮರ್ಶೆಯ 'ಶೇಕ್‌ಸ್ಪಿಯರ್ ಮನೆಗೆ ಬಂದ' ನಾಟಕ ಕನ್ನಡ ಸಾಹಿತ್ಯದಲ್ಲಿ ಬಲು ಅಪರೂಪವೆಂದರೆ ತಪ್ಪಾಗಲಾರದು. ಕೃತಿಯ ಅರಿಕೆಯಲ್ಲಿ ತಿಳಿಸಿದಂತೆ 'ಈ ನಾಟಕದ ಕಲ್ಪನೆ ನನ್ನೊಳಗೆ ಹುಟ್ಟಿದ್ದು 1999ರಲ್ಲಿ! ನನ್ನ ಅನೇಕ ಸೃಜನಶೀಲ ಕೃತಿಗಳಂತೆ ಇದು ಕೂಡ ಹತ್ತು ಹದಿನೈದು ವರ್ಷಗಳ ಕಾಲ ನನ್ನೊಳಗೆ ಹೊರಳಾಡಿ ಕೊನೆಗೂ 2013ನೇ ಇಸವಿಯ ಆಗಸ್ಟ್ ತಿಂಗಳಲ್ಲಿ ರಂಗಭೂಮಿಯ ಮೇಲೆ ಬಂತು' ಎಂಬ ನುಡಿಗಳು ನಟರಾಜ್ ಹುಳಿಯಾರರಿಗೆ ಇದರ ರಚನೆಯ ಪರವಿದ್ದ ಅಪಾರ ಒಲವು ಮತ್ತು ಕಟಿಬದ್ಧತೆಯನ್ನು ಪ್ರತಿನಿಧಿಸುತ್ತದೆ. ನಟರಾಜ್ ಹೊನ್ನವಳ್ಳಿ ಅವರ ನಿರ್ದೇಶನದಲ್ಲಿ ರಂಗ ಪ್ರವೇಶಗೊಂಡು ಹಲವು ಪ್ರದರ್ಶನಗಳನ್ನು ಕಂಡು ಜನ ಮೆಚ್ಚುಗೆಗಳಿಸಿ ಯಶಸ್ವಿಯಾಗಿದ್ದು ಇದರ ಮತ್ತೊಂದು ವಿಶೇಷ.

ಈಗಾಗಲೇ ಎರಡು ಮುದ್ರಣಗಳನ್ನು ಕಂಡು ಮೂರನೆಯ ಮುದ್ರಣ ಕಾಣುವ ಹಾದಿಯಲ್ಲಿರುವ ಈ ಕೃತಿ ಆರು ಅಂಕಗಳ ನಾಲ್ಕು ದೃಶ್ಯಗಳ ಮೂಲಕ ಐವತ್ತೇಳು ಪುಟಗಳಿಂದ ಕೂಡಿದೆ. ಶೇಕ್‌ಸ್ಪಿಯರ್ ರಚಿಸಿದ ನೈಜ ಪಾತ್ರಗಳೇ ರೂಪಾಂತರವಾಗಿ ರಂಗದ ಮೇಲೆ ಅಭಿನಯಿಸುತ್ತವೆ. ಲೋಕಲ್ ಬಾಯ್ಸ್ ತಮ್ಮ ಅಭಿಮಾನದ ನಾಟಕಕಾರನ ಮುಖ್ಯ ಪಾತ್ರಗಳ ಹೆಸರುಗಳನ್ನು ತಮ್ಮವೆಂದು ಭಾವಿಸಿಕೊಂಡು ನಟನೆಯನ್ನು ಜೀವಂತವಾಗಿಸಿದ್ದಾರೆ. ಅವರಿಗೆ ಮಾರ್ಗದರ್ಶಕನಾಗಿ ಮೇಷ್ಟ್ರು ವೈಸ್ ಮ್ಯಾನ್ ಇರುತ್ತಾನೆ, ಈತ ಶೇಕ್‌ಸ್ಪಿಯರ್ ನಾಟಕಗಳ ಸೂಕ್ಷ್ಮ ಮತ್ತು ಸಮಗ್ರ ಓದುಗನು ಕೂಡ. ಲೋಕಲ್ ಬಾಯ್ಸ್ – ವೈಸ್ ಮ್ಯಾನ್ ನಡುವಿನ ಸಂಭಾಷಣೆ, ಶೇಕ್‌ಸ್ಪಿಯರ್ ಮತ್ತು ಅವನ ಹೆಂಡತಿಯ ನಡುವಿನ ಸರಸ ಸಲ್ಲಾಪ, ವೈಸ್ ಮ್ಯಾನ್–ಶೇಕ್‌ಸ್ಪಿಯರ್ ನಡುವಿನ ಬರವಣಿಗೆಯ ವಿಶ್ಲೇಷಣೆ, ಶೇಕ್‌ಸ್ಪಿಯರ್ ತನ್ನ ಬರವಣಿಗೆ ಮತ್ತು ಆಲೋಚನೆಗಳನ್ನು ಒರೆಗೆ ಹಚ್ಚುವ ಸನ್ನಿವೇಶಗಳಿಂದ ನಾಟಕ ಗಮನ ಸೆಳೆಯುತ್ತದೆ.

ರಂಗ ಪ್ರಯೋಗ:

ವಿಲಿಯಂ ಶೇಕ್‌ಸ್ಪಿಯರ್ ಹಲವು ವರ್ಷಗಳ ನಂತರ ತನ್ನ ಸ್ವಂತ ಊರಾದ ಇಂಗ್ಲೆಂಡಿನ ಸ್ಟ್ರಾಟ್‌ಫರ್ಡ್‌ಗೆ ಮರಳುತ್ತಿದ್ದಾನೆಂಬ ಸುದ್ದಿಯಿಂದ ಊರಿನವರ ಹರ್ಷೋದ್ಗಾರದ ನಡುವೆ ನಾಟಕ ಶುರುವಾಗುತ್ತದೆ. ಲೋಕಲ್ ಬಾಯ್ಸ್ ನಾಟಕದ ಪಾತ್ರಗಳಾಗಿ ಅವುಗಳ ಸ್ವಭಾವ, ವರ್ತನೆ, ವ್ಯಕ್ತಿತ್ವಗಳನ್ನು ಸರಳವಾಗಿ ಪರಿಚಯಿಸುತ್ತಾರೆ. ಜಗತ್ತಿಗೆ ಮಹಾನ್ ನಾಟಕಕಾರನಾಗಿ ಕಾಣುವ ಶೇಕ್ಸ್‌ಪಿಯರ್‌ನನ್ನು ಒಬ್ಬ ಸಾಮಾನ್ಯ ಮನುಷ್ಯ, ಕಳ್ಳನಂತೆ ನಮ್ಮದೇ ಮನೆಯ ಹಿಂಬಾಗಿಲಿನಿಂದ ಒಳಗೆ ಬರುವಂತೆ ಚಿತ್ರಿಸಿರುವುದು ಓದುಗರಲ್ಲಿ ಕಾವ್ಯ ಮತ್ತು ಬದುಕಿನ ಬಗ್ಗೆ ಹೊಸ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ.

ಎ ಮಿಡ್ ಸಮ್ಮರ್ ನೈಟ್ ಡ್ರೀಮ್ಸ್ ನಾಟಕದಲ್ಲಿ ರಾಣಿ ಲವ್ ಜ್ಯೂಸ್ ಕುಡಿದು ಮಲಗಿ ಎಚ್ಚರಗೊಂಡು ಯಾರನ್ನು ನೋಡಿದರೆ ಅವರ ಮೇಲೆ ಪ್ರೀತಿ ಉಂಟಾಗುತ್ತದೆ, ಆಗ ಅಲ್ಲಿದ್ದ ಸೇವಕ (ಕತ್ತೆ ಮುಖಧಾರಿ) ಬಾಟಮ್ ಇಷ್ಟವಾಗುತ್ತಾನೆ. ಈ ಕುತೂಹಲ ಹೀಗೆ ಸಾಗಿ ಮುಂದೇನಾಯ್ತು ಎಂಬುದನ್ನು ಬ್ರಿಟನ್‌ನ ಅತ್ಯಂತ ದೀರ್ಘಾವಧಿ ರಾಣಿ ಕ್ವೀನ್ ಎಲಿಜಬೆತ್‌ಳನ್ನು ಅಣಕಿಸುವಂತೆ 'ಎಲ್ಲಾ ಹೆಂಗಸರು ಪ್ರೀತಿಸುವಾಗ ಕತ್ತೆಗಳ ತರ ಇರೋ ಗಂಡಸರನ್ನೇ ಪ್ರೀತಿಸುತ್ತಾರೆ ಆದರೆ ಕಾಮದ ಹಣ್ಣಿನ ರಸ ಹೆಣ್ಣಿನ ಕಣ್ಣಿಗೆ ಅಂಟಿಕೊಂಡಿರುವುದರಿಂದ ಅದು ಕತ್ತೆ ಅಂತ ಗೊತ್ತಾಗುವುದಿಲ್ಲ, ಕೊನೆಗೂ ಅದು ಕತ್ತೆ ಅಂತ ಗೊತ್ತಾಗುವ ಹೊತ್ತಿಗೆ ಕಾಲ ಮಿಂಚಿ ಹೋಗಿರುತ್ತದೆ'. ಈ ಬಗೆಯ ಎನ್ಯಾಕ್ಟ್ ಸನ್ನಿವೇಶಗಳು ತರುವುದು ಆಕರ್ಷಕವಾಗಿದೆ. ರೋಮಿಯೋ ಜೂಲಿಯೆಟ್, ಮ್ಯಾಕ್ಬೆತ್, ಲೋಕಲ್ ಪಾತ್ರಗಳು ವಿಜೃಂಭಿಸಿವೆ.

ಕಿಂಗ್ ಲಿಯರ್ ರಾಜ ತನ್ನ ಸಿಲ್ಲಿ ಪ್ರಶ್ನೆಗಳಿಂದ ದುರಂತಕ್ಕೀಡಾದದ್ದು. ಆ ಇಳಿವಯಸ್ಸಿನಲ್ಲಿ ತನ್ನ ಹೆಣ್ಣು ಮಕ್ಕಳಿಗೆ ರಾಜ್ಯ ಹಂಚುವ ಮೊದಲು 'ನಿಮಗೆ ನನ್ನನ್ನು ಕಂಡರೆ ಎಷ್ಟು ಪ್ರೀತಿ, ಹೇಳಿ ನೋಡೋಣ?' ಎಂಬ ಹುಡುಗಾಟಿಕೆಯ ಪ್ರಶ್ನೆಯನ್ನು ಏಕೆ ಕೇಳಿದ? ಅವನ ಕೊನೆಯ ಮಗಳು ಕಾರ್ಡೀಲಿಯಾ ತನ್ನ ಅಕ್ಕಂದಿರಂತೆ ಒಂಚೂರು ಉತ್ಪ್ರೇಕ್ಷೆ ಮಾಡಿ, 'ಅಪ್ಪಾ ನಿನ್ನನ್ನು ಕಂಡರೆ ನನಗೆ ಸಿಕ್ಕಾಪಟ್ಟೆ ಪ್ರೀತಿ!' ಎಂದಿದ್ದರೆ ಲಿಯರ್‌ನ ದುರಂತ ಸರಣಿ ತಪ್ಪುತ್ತಿತ್ತೆ? ಸದಾ ಆತ್ಮಪರೀಕ್ಷೆ ಮಾಡಿಕೊಳ್ಳುವ ಬುದ್ಧಿಜೀವಿ ಹ್ಯಾಮ್ಲೆಟ್ ತನ್ನ ತಂದೆಯ ಸಾವಿನ ಪ್ರತೀಕಾರದ ಸುಳಿಯಲ್ಲಿ ಸಿಕ್ಕಿ ಯಾಕೆ ನಾಶವಾದ? ಹೀಗೆ ಹಲವು ಕತೆಗಳ ಸಾರಾಂಶವನ್ನಷ್ಟೇ ಮಾತಾಡುತ್ತಾ ತನ್ನ ಉದ್ದೇಶಕ್ಕೆ ಅನುಗುಣವಾಗಿ ನಾಟಕಕಾರ ನಾಟಕವನ್ನು ನೇಯ್ದುಕೊಂಡಿದ್ದಾನೆ.

ಮೊದಲಿನಿಂದಲೂ ಶೇಕ್ಸ್ಪಿಯರ್ ನಾಟಕಗಳನ್ನು ವಿರೋಧಿಸುವ ಲಂಡನ್ನಿನ ಇಂಗ್ಲಿಷ್ ಪಂಡಿತರ ದೊಡ್ಡ ದಂಡೇ ಇತ್ತು. ಮಾರ್ಲೋ, ಬೆಂಜಾನ್ಸನ್, ಪ್ಲುಟಾರ್ಕ್ ಪುಸ್ತಕಗಳಿಂದ ಕಥಾವಸ್ತು, ಪಾತ್ರ ಬೆಳವಣಿಗೆ, ಘಟನಾವಳಿಗಳನ್ನು ಕದಿಯುತ್ತಾನೆ. ಓವಿಡ್ ಕಥೆಗಳಿಂದ ಲಿಫ್ಟ್ ಮಾಡಿದ್ದಾನೆಂಬ ಆರೋಪಕ್ಕೆ 'ಬರೆಯೋದು, ಕದಿಯೋದು ಕವಿಯ ಸಹಜ ಗುಣ. ಸೂರ್ಯ, ಚಂದ್ರ, ಭೂಮಿ ಸಹ ಕದ್ದು ತನ್ನ ಕರ್ತವ್ಯ ನಿರ್ವಹಿಸುವ' ನಿದರ್ಶನದೊಂದಿಗೆ ನಾಟಕಕಾರ ನೀಡುವ ಸ್ಟೇಟ್ಮೆಂಟ್ ಸೃಜನಶೀಲ ಪ್ರಯೋಗದ ಗಂಭೀರತೆಗೆ ತೆರೆಯುತ್ತದೆ.

ಶೇಕ್ಸ್ಪಿಯರ್ 1800 ಹೊಸ ಪದ ಪ್ರಯೋಗಗಳನ್ನು ಮಾಡಿರುವುದನ್ನು ವಿದ್ವಾಂಸರು ಹೆಕ್ಕಿ ತೋರಿಸಿದ್ದಾರೆ: ಅಸಾಸಿನೇಷನ್, ಅಪ್ಸ್ಟೇರ್ಸ್, ಕೋಲ್ಡ್ ಬ್ಲಡೆಡ್, ಐರನ್ ಹೀಲ್, ಗಾಸಿಪ್, ಲಾಫಬಲ್, ಅನ್‌ಡ್ರೆಸ್, ಅರೌಸ್...ಹೀಗೆ ಶೇಕ್ಸ್ಪಿಯರ್‌ನಲ್ಲಿ ಹೊಸ ಪದವೊಂದು ಹುಟ್ಟುತ್ತದೆ, ಹಳೆಯ ಶಬ್ದಗಳು ರೂಪಾಂತರಗೊಳ್ಳುತ್ತಾ ನವಪದ ನಿರ್ಮಾಣವಾಗುತ್ತದೆ. ಈತನು ಬರೆಯೋದು ಇಂಗ್ಲೀಷೇ ಅಲ್ಲ, ನಮ್ಮ ಸುಂದರ ಇಂಗ್ಲಿಷ್ ಭಾಷೆಯ ಸ್ಪೆಲ್ಲಿಂಗು, ವಾಕ್ಯ ರಚನೆ, ಪದ ಸಂಪತ್ತನ್ನು ಹಾಳು ಮಾಡುತ್ತಿದ್ದಾನೆ ಎಂದ ಆಂಗ್ಲೋ ವ್ಯಾಕರಣಭಯಂಕರರ ನಡುವೆ ನಾಟಕ ಸಾಮ್ರಾಜ್ಯದ

ಚಕ್ರವರ್ತಿಯಾಗಿ ಮೆರೆದದ್ದು ಹೇಗೆ ಎಂಬುದನ್ನು 'ಶೇಕ್‌ಸ್ಪಿಯರ್ ಮನೆಗೆ ಬಂದ' ನಾಟಕದ ನಿರೂಪಕರು ಸ್ಪಷ್ಟೀಕರಿಸಿದ್ದಾರೆ.

ನಾಟಕವನ್ನು ಓದುವಾಗ ಅಥವಾ ನೋಡುವಾಗ ಪಾತ್ರ ಕ್ರಿಯೆಗಳಿಗನುಗುಣವಾಗಿ ಮೋಟಿವೇಶನ್ ಕನೆಕ್ಟ್ ಆಗುತ್ತದೆ. ಸ್ತ್ರೀವಾದಿ ಹಿನ್ನೆಲೆಯಲ್ಲಿ ಶೇಕ್‌ಸ್ಪಿಯರ್ ಪತ್ನಿ ಆನ್ ಹ್ಯಾಥ್‌ವೇ ಎತ್ತಿದ ಹಲವು ಪ್ರಶ್ನೆಗಳಿಗೆ ಉತ್ತರಗಳು ಇಲ್ಲಿ ಸಿಗುತ್ತವೆ. ಹೆಣ್ಣನ್ನು ಸಂಕುಚಿತವಾಗಿ, ಗಂಡಿಗೆ ಅಸಮಾನವಾಗಿ ನೋಡುವ ಕ್ರಮವನ್ನು ವಿರೋಧಿಸುತ್ತಾಳೆ. 'ಚಂಚಲತೆಯೇ ನಿನ್ನ ಹೆಸರೇ ಹೆಣ್ಣಲ್ಲವೇ, ಅಸೂಯೆ ನಿನ್ನ ಹೆಸರೇ ಹೆಣ್ಣಲ್ಲವೇ', ಎಂಬ ಬರಹವನ್ನು ಆಕ್ಷೇಪಿಸುತ್ತಾ ಗಂಡನೊಂದಿಗೆ ವಾಗ್ವಾದ ಮಾಡುತ್ತಾಳೆ. ಮಚ್ ಅಡೋ ಎಬೌಟ್ ನಥಿಂಗ್ ನಾಟಕದಲ್ಲಿ ಹೆಣ್ಣನ್ನು ಅನುಮಾನಿಸಿ ಎಂಗೇಜ್‌ಮೆಂಟ್ ಮುರಿದು ದರ್ಪ ತೋರಿದ ಗಂಡಸನ್ನು ಚಂಚಲೆ, ಅಸೂಯೆ ಎಂದು ಕರೆದಿಲ್ಲವೆಂದು ರೇಗುತ್ತಾಳೆ. ಅವಳ ಹಲವು ಪ್ರಶ್ನೆಗಳಿಗೆ ಉತ್ತರ ರೂಪದಲ್ಲಿ ಶೇಕ್‌ಸ್ಪಿಯರ್ ತನ್ನ ನಾಟಕಗಳ ಇತರೆ ಉದಾಹರಣೆಗಳನ್ನು ನೀಡುತ್ತಾ ಜೆಂಡರ್ ಬಯಾಸ್ ಪ್ರಶ್ನೆಗಳನ್ನು ಪರಿಹರಿಸುತ್ತಾನೆ. ಇವುಗಳನ್ನು ಸ್ತ್ರೀವಾದಿ ಹಿನ್ನೆಲೆಯಲ್ಲಿ ನಾಟಕಗಳನ್ನು ನೋಡುವ, ಪರಿಭಾವಿಸುವ, ವಿಮರ್ಶಿಸುವ ಹೊಸ ಆಲೋಚನೆಯನ್ನು ಸ್ವೀಕರಿಸುವ ಸಂವಾದಗಳು ತುಂಬಾ ಆಕರ್ಷಕವಾಗಿವೆ.

ಈ ನಾಟಕದಲ್ಲಿ ಮೇಷ್ಟ್ರು ವೈಸ್ ಮ್ಯಾನ್ ಪಾತ್ರ ನಾಟಕದುದ್ದಕ್ಕೂ ಹೈಲೈಟ್. ಓದುಗರ ಮನದಲ್ಲಿ ಖಾಯಮ್ಮಾಗಿ ಉಳಿಯುವಂತೆ ನಟಿಸಿದ್ದಾರೆ. ಶೇಕ್‌ಸ್ಪಿಯರ್ ನಾಟಕಗಳ ಪೂರ್ಣ ಗ್ರಹಿಕನಾಗಿ, ಲೋಕಲ್ ಬಾಯ್ಸ್ ಗುಂಪಿಗೆ ನಾಯಕನಾಗಿ, ಅವರಲ್ಲಿ ನಾಟಕದ ಅರಿವು ಮೂಡಿಸಿ ಅವರಿಂದ ಆಡಿಸಿ, ವರ್ತಮಾನದಲ್ಲಿ ನಿಂತು ನೋಡುವ ಹೊಸ ಕಾಲದ ವಿಮರ್ಶಕನಾಗಿ ಗೋಚರಿಸುತ್ತಾನೆ. ಶೇಕ್‌ಸ್ಪಿಯರ್ ನಾಟಕಗಳ ಗುಣ ವಿಶೇಷತೆಗಳನ್ನು ಪರಿಪೂರ್ಣವಾಗಿ ಮಂಡಿಸುತ್ತಾನೆ. ಇವರ ತಾಳಕ್ಕೆ ಲೋಕಲ್ ಬಾಯ್ಸ್ ಕೋರಸ್ಸಿನಂತೆ ಕೆಲಸ ಮಾಡುತ್ತಾರೆ. ಒಂದು ವೇಳೆ ನಾಟಕ ಅಭಿನಯದಲ್ಲಿ, ನಾಟಕ ಗ್ರಹಿಕೆಯಲ್ಲಿ ಹದ ತಪ್ಪಿದಾಗ ಸರಿಪಡಿಸುವ ಸೂತ್ರಧಾರಿಯಾಗಿ ಕಾಣಿಸುತ್ತಾನೆ. ಕೊನೆಯಲ್ಲಿ ಶೇಕ್ಸ್ಪಿಯರ್ ಪಾತ್ರದ ಜೊತೆಗೆ ನಿಂತು ಆತನ ಫಿಲಾಸಫಿಕಲ್ ಸ್ಟೇಟ್‌ಮೆಂಟ್ ಅರಿಯುವುದು ಕಷ್ಟವೆಂದು ಆತನಿಗೆ ತಿಳಿಸುತ್ತಾನೆ. ಹಾಗೆ ಶೇಕ್‌ಸ್ಪಿಯರ್ ಗುರುಗಳಾದ ಸೊಫೊಕ್ಲಿಸ್, ಈಸ್ಕಿಲಸ್‌ರವರಿಗೂ ಹೊಳೆಯದ ಹಲವು ವಿಷಯಗಳು ಅವರ ಶಿಷ್ಯನಾದ ಶೇಕ್‌ಸ್ಪಿಯರ್‌ಗೆ ಹೊಳೆದಿದ್ದು ಅಚ್ಚರಿಯೇ ಸರಿ ಎನ್ನುವುದನ್ನು ನೋಡುಗರಿಗೆ ತಿಳಿಯ ಹೇಳುತ್ತಾನೆ.

ಯಾರು ಶೇಕ್‌ಸ್ಪಿಯರ್ ಸಾಹಿತ್ಯಕ್ಕೆ, ನಾಟಕಗಳಿಗೆ ಪ್ರಬುದ್ಧ ರೀತಿಯಲ್ಲಿ ಮುಖಾಮುಖಿಯಾಗುತ್ತಾರೋ ಅಂತವರ ಮನೆಗೆ ತಪ್ಪದೆ ಬರುತ್ತಾರೆ. ಅದಕ್ಕಿಂತ ಮೊದಲು ಅವರ ಮನಕ್ಕೆ ಬರಮಾಡಿಕೊಳ್ಳುವ ಅನಿವಾರ್ಯತೆಯನ್ನು ನಾಟಕಕಾರ ಬಹಳ ನಿಖರವಾಗಿ ಪ್ರತಿಪಾದಿಸಿದ್ದಾನೆ. ಈ ನಾಟಕದ ಅಂತ್ಯದಲ್ಲಿ ಶೇಕ್‌ಸ್ಪಿಯರ್ ವೈಸ್ ಮ್ಯಾನ್ ಮನೆಗೆ ಬರುವುದು, ಜೊತೆ ಕೂತು ವೈನ್ ಕುಡಿಯುವುದು

ಅದಕ್ಕೊಂದು ನಿದರ್ಶನ. ಸಾಮಾನ್ಯವಾಗಿ ಪ್ರತಿ ನಾಟಕದ ಉದ್ದೇಶ ಯಾವುದೋ ಒಂದು ರೀತಿಯಲ್ಲಿ ನೋಡುಗರ ಮನಸ್ಸು ಸೂರೆಗೊಳ್ಳುವುದಾಗಿರುತ್ತದೆ. ಸಾಮಾಜಿಕವಾಗಿ, ರಾಜಕೀಯವಾಗಿ, ಪೌರಾಣಿಕವಾಗಿ, ಸಾಹಿತ್ಯಿಕವಾಗಿ ಅದರ ಉದ್ದೇಶವನ್ನು ಈಡೇರಿಸಿಕೊಳ್ಳುವುದರತ್ತ ಗಮನ ಕೇಂದ್ರೀಕರಿಸುತ್ತವೆ. ಪ್ರಸ್ತುತ ಸಾಹಿತ್ಯಿಕ ಆಧಾರಿತವಾದ ಈ ನಾಟಕ ತನ್ನ ಉದ್ದೇಶವನ್ನು ಹಲವು ವಿನ್ಯಾಸಗಳಿಂದ ಈಡೇರಿಸಿಕೊಂಡಿದೆ ಎಂದು ಹೇಳಬಹುದು.

ಒಟ್ಟಾರೆಯಾಗಿ ಅಲ್ಲಲ್ಲಿ ಕೇಳಿಸುವ ಉದ್ದುದ್ದ ಡೈಲಾಗ್‌ಗಳನ್ನು ತುಂಡರಿಸಿ ಆ ಪಾತ್ರಗಳ ಭಾವ ತೀವ್ರತೆಯನ್ನು ಇಮ್ಮಡಿಗೊಳಿಸಬಹುದಿತ್ತೇನೋ ಎನ್ನುವುದು ಹೊರತುಪಡಿಸಿದರೆ, ಒಂದು ಅರ್ಥಪೂರ್ಣವಾದ ದೃಶ್ಯ ಕಾವ್ಯ ಬರೆದ, ಅದನ್ನು ಆಕರ್ಷಕವಾಗಿ ನಿರ್ದೇಶಿಸಿದ ನಟರಾಜ್ ದ್ವಯರ ಕಾರ್ಯಸಿದ್ಧಿ ಅದ್ಭುತವಾಗಿದೆ.

ಪರಾಮರ್ಶನ ಗ್ರಂಥಗಳು:

1. ನಟರಾಜ್ ಹುಳಿಯಾರ್, (2025), ಶೇಕ್ ಸ್ಪಿಯರ್ ಮನೆಗೆ ಬಂದ, ಚನ್ನಪಟ್ಟಣ: ಪಲ್ಲವ ಪ್ರಕಾಶನ.
2. ಶೇಷಗಿರಿ ರಾವ್ ಎಲ್. ಎಸ್., (2013), ಹೊಸಗನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು: ಅಂಕಿತ ಪುಸ್ತಕ.
3. ಮರುಳು ಸಿದ್ದಪ್ಪ ಕೆ., (2018), ಆಧುನಿಕ ಕನ್ನಡ ನಾಟಕ, ಬೆಂಗಳೂರು: ಸಪ್ನ ಬುಕ್ ಹೌಸ್.
4. ಸುರೇಶ್ ನಾಗಲಮಡಿಕೆ, (2013), ಶೇಕ್ ಸ್ಪಿಯರ್ ಮನೆಗೂ ಬಂದ ಮನಗೂ ಬಂದ, ಬೆಂಗಳೂರು: ಅವಧಿ ಆನ್‌ಲೈನ್ ಪತ್ರಿಕೆ.
5. ಶ್ಯಾಮಲಾ ಗುರುಪ್ರಸಾದ್, (2023), ಸದಾ ನಮ್ಮೊಡನೆ ಶೇಕ್ಸ್‌ಪಿಯರ್, ಬೆಂಗಳೂರು: ಪ್ರಜಾವಾಣಿ ಪತ್ರಿಕೆ.